ಸ್ಥಾಪನೆ- 1962

ಶ್ರೀ ಜಗದ್ಗುರು ಜಯವಿಭವ ವಿದ್ಯಾಸಂಸ್ಥೆ (ರಿ), ದಾವಣಗೆರೆ.

# ವಿದ್ಯಾವರಣ

ವಿಶೇಷ ಪುರವಣಿ ಮಕ್ಕಳ ಮಾಸಪತ್ರಿಕೆ

ದಿನಾಂಕ : 14/06/2026 : www.sjjes.ac.in : info@sjjes.ac.in : +91.8192.277698

## ಶಿವಯೋಗಾಶ್ರಮದ ಮುರುಘಾಶ್ರೀಗಳ ಗದ್ದುಗೆಗೆ ಪೂಜೆ



ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಪ್ರೌಢಶಾಲೆಯಲ್ಲಿ ದಿನಾಂಕ:01–06–2026 ರಂದು ಶಾಲಾ ಪ್ರಾರಂಭೋತ್ಸವವನ್ನು ಮಾಡಲಾಯಿತು. ಈ ದಿನದಂದು 8, 9, 10ನೇ ತರಗತಿಯ ಎಲ್ಲ ವಿದ್ಯಾರ್ಥಿಗಳು ಶಾಲೆಗೆ ಆಗಮಿಸಿದ್ದರು. ಶಾಲೆಯನ್ನು ಹಸಿರು ತೋರಣದಿಂದ ಶೃಂಗರಿಸಿದ್ದರು. ಈ ದಿನ ಬೆಳಿಗ್ಗೆ 9.50 ಕ್ಕೆ ಸರಿಯಾಗಿ ಶಾಲಾ ಪ್ರಾರ್ಥನೆಯೊಂದಿಗೆ ಮಕ್ಕಳನ್ನು ಸ್ವಾಗತಿಸಲಾಯಿತು. ಈ ದಿನ ನಮ್ಮ ಶಾಲೆಯ ಕಾರ್ಯದರ್ಶಿಯವರಾದ ಶ್ರೀ ಮನೋಹರ ಎಸ್ ಚಿಗಟೇರಿಯವರು ಹಾಜರಾಗಿದ್ದು ಮಕ್ಕಳಿಗೆ ಹೂವನ್ನು ಚೆಲ್ಲುವುದರ ಮೂಲಕ ತುಂಬಾ ಆತ್ಮೀಯತೆ ಮತ್ತು ಪ್ರೀತಿಯಿಂದ ಬರಮಾಡಿಕೊಳ್ಳಲಾಯಿತು. ಮಕ್ಕಳಿಗೆ ಸಿಹಿ ಊಟದೊಂದಿಗೆ ಊಟವನ್ನು ಬಡಿಸಿ ಮಕ್ಕಳನ್ನು ಶಾಲೆಗೆ ಬರಮಾಡಿಕೊಳ್ಳಲಾಯಿತು. ಮಕ್ಕಳು ತುಂಬಾ ಸಂತಸದಿಂದ ಶಾಲೆಗೆ ಆಗಮಿಸಿದರು, ಮತ್ತು 8ನೇ ತರಗತಿಯ ಹೊಸ ವಿದ್ಯಾರ್ಥಿಗಳಿಗೆ ಶಾಲೆಯ ಬಗ್ಗೆ ಮತ್ತು ಇಲ್ಲಿನ ರೀತಿ ನೀತಿಗಳ ಬಗ್ಗೆ ಮಾಹಿತಿ ನೀಡಿ ಮಕ್ಕಳಿಗೆ ಪೆನ್ನನ್ನು ನೀಡುವುದರ ಮೂಲಕ ತರಗತಿಗೆ ಸ್ವಾಗತಿಸಲಾಯಿತು.

ಆ ದಿನ ಶ್ರೀ ಮುರುಘಾಮಠಕ್ಕೆ ಭೇಟಿ ನೀಡಿ ಶ್ರೀ ಮುರುಘೇಶನ ಗದ್ದುಗೆಗೆ ಪೂಜೆ ಸಲ್ಲಿಸಲಾಯಿತು.ಹಾಗೂ ಮುದಿನ ಶೈಕ್ಷಣಿಕ ಚಟುವಟಿಕೆಗಳು ಸುಗಮವಾಗಿ ನಡೆಯಲು ಪ್ರಾರ್ಥಿಸಲಾಯಿತು.

## ಎನ್. ಆರ್. ಕ್ಯಾಂಪಸ್‌ನಲ್ಲಿ ಆಂಗ್ಲ ಮಾಧ್ಯಮದ ಒಂದನೇ ತರಗತಿ ಪ್ರಾರಂಭ



ಎನ್.ಅರ್. ಕ್ಯಾಂಪಸ್‌ನಲ್ಲಿ ಪೋಷಕರ ಬಹುದಿನಗಳ ಬೇಡಿಕೆಯಾಗಿದ್ದ ಒಂದರಿಂದ ಐದನೇ ತರಗತಿವರೆಗೆ ಆಂಗ್ಲ ಮಾಧ್ಯಮದ ಕಿರಿಯ ಪ್ರಾಥಮಿಕ ಶಾಲೆಯನ್ನು ದಿನಾಂಕ:೦೮/೦೬/೨೦೨೬ರ ಸೋಮವಾರ ನಮ್ಮ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀಯುತ ಬಸವರಾಜಪ್ಪ ಬೆಳಗಾವಿ ಅವರು ಉದ್ಘಾಟಿಸುವುದರ ಮೂಲಕ ಆಂಗ್ಲ ಮಾಧ್ಯಮದ ಒಂದನೇ ತರಗತಿಗೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಸಂಸ್ಥೆಯ ಕಾರ್ಯದರ್ಶಿಯವರಾದ ಮನೋಹರ್ ಎಸ್. ಚಿಗಟೇರಿ , ಜಯದೇವ ಚಿಗಟೇರಿ, ವಿಜಯಾ ಹಿರೇಮಠ್ ಅವರು ಶೈಕ್ಷಣಿಕ ಸಲಹೆಗಾರರಾದ ಎಂ.ಟಿ.ಮಳಗಿ, ಶ್ರೀಮತಿ ವಾಗ್ದೇವಿ ಆರ್. ಅವರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಗಣ್ಯರು ಮಾತನಾಡಿ, ಆಂಗ್ಲ ಮಾಧ್ಯಮ ಕಿರಿಯ ಪ್ರಾಥಮಿಕ ಶಾಲೆ ಪ್ರಾರಂಭಕ್ಕೆ ಸರ್ಕಾರದಿಂದ ಅನುಮತಿ ಪಡೆಯಲು ಅತ್ಯಂತ ಕಾಳಜಿಯಿಂದ ಶ್ರಮ ವಹಿಸಿ ಯಶಸ್ವಿಯಾದ ಕಾರ್ಯದರ್ಶಿ ಮನೋಹರ್ ಚಿಗಟೇರಿಯವರು ಕಾರ್ಯವನ್ನು ತುಂಬು ಹೃದಯದಿಂದ ಶ್ಲ್ಯಾಘಿಸಿದರು. ಈ ಕಾರ್ಯಕ್ರಮದಲ್ಲಿ ಶ್ರೀ ಜಗದ್ಗುರು ಜಯವಿಭವ ವಿದ್ಯಾಸಂಸ್ಥೆ (ರಿ.) ಆಶ್ರಯದಲ್ಲಿ ನಡೆಯುತ್ತಿರುವ ಎಲ್ಲಾ ಶಾಲೆಗಳ ಮುಖ್ಯೋಪಾಧ್ಯಾಯರು ಹಾಗೂ ನರಸರಾಜ ಕ್ಯಾಂಪಸ್‌ನ ಎಲ್ಲಾ ಶಾಲೆಗಳ ಶಿಕ್ಷಕ ಸಿಬ್ಬಂದಿ ವರ್ಗದವರು ಹಾಗೂ ವಿದ್ಯಾರ್ಥಿ ವಿದ್ಯಾರ್ಥಿನಿಯರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಶಾರದಾ ಪೂಜಾ ಕಾರ್ಯದ ಮೂಲಕ ಆಂಗ್ಲ ಮಾಧ್ಯಮದ ಒಂದನೇ ತರಗತಿಗೆ ಪ್ರವೇಶ ಪಡೆದ ಎಲ್ಲಾ ಮಕ್ಕಳಿಗೆ ಪೆನ್ಸಿಲ್, ರಬ್ಬರ್ ಮತ್ತು ಚಾಕ್‌ಲೇಟ್ ನೀಡಿ ಶುಭ ಹಾರೈಸಲಾಯಿತು.





## ಗುರುಬಸಮ್ಮ ವಿ. ಚಿಗಟೇರಿ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆ



ದಿನಾಂಕ: ೦೫/೦೬/೨೦೨೬ರ ಶುಕ್ರವಾರ ಗುರುಬಸಮ್ಮ ವಿ. ಚಿಗಟೇರಿ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆಯ ಸಂಯುಕ್ತಾಶ್ರಯದಲ್ಲಿ ವಿಶ್ವ ಪರಿಸರ ದಿನಾಚರಣೆಯನ್ನು ಅಚರಿಸಲಾಯಿತು. ಈ ಸಂದರ್ಭದಲ್ಲಿ ಶಾಲೆಯ ವಿದ್ಯಾರ್ಥಿ ವಿದ್ಯಾರ್ಥಿನಿಯರು ಪರಿಸರದ ಬಗ್ಗೆ ಮಾತನಾಡಿ, ಪರಿಸರದ ಮಹತ್ವ ಮತ್ತು ಪರಿಸರ ಸಂರಕ್ಷಣೆಯ ಕುರಿತು ಜಾಗೃತಿ ಮೂಡಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರೌಢಶಾಲೆಯ ಮುಖ್ಯ ಶಿಕ್ಷಕರಾದ ಶ್ರೀಯುತ ಹೆಚ್. ನಿಂಗಪ್ಪನವರು ವಹಿಸಿದ್ದರು. ಕಾರ್ಯಕ್ರಮದಲ್ಲಿ ಶಾಲೆಯ ಎಲ್ಲಾ ಶಿಕ್ಷಕ ಸಿಬ್ಬಂದಿ ವರ್ಗದವರು, ವಿದ್ಯಾರ್ಥಿ, ವಿದ್ಯಾರ್ಥಿನಿಯರು ಭಾಗವಹಿಸಿದ್ದರು. ಕೊನೆಗೆ ಮಕ್ಕಳಿಗೆ ಗಿಡಗಳನ್ನು ವಿತರಿಸಲಾಯಿತು.

# ವಿನೋಬನಗರ ಕ್ಯಾಂಪಸ್‌ನಲ್ಲಿ ವಿಶ್ವ ಪರಿಸರ ದಿನಾಚರಣೆ:



ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ ಜೂನ್ 5, 2026 ರಂದು ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಪ್ರೌಢಶಾಲೆಯಲ್ಲಿ ದಿನಾಂಕ 5–6–2026 ರಂದು ಪರಿಸರ ದಿನಾಚರಣೆಯ ಪ್ರಯುಕ್ತ ಬೆಳಗಿನ ಪ್ರಾರ್ಥನಾ ಅವಧಿಯಲ್ಲಿ ಮಕ್ಕಳಿಗೆ ಪರಿಸರದ ಬಗ್ಗೆ ಜಾಗೃತಿ ಮೂಡಿಸಿ ಪರಿಸರ ಎಂಬುದು ನಮ್ಮ ಜೀವನಕ್ಕೆ ಎಷ್ಟು ಮುಖ್ಯ ಎಂದು ತಿಳಿಸಲಾಯಿತು. ಮಧ್ಯಾಹ್ನದ ಅವಧಿಯಲ್ಲಿ ಪರಿಸರ ದಿನಾಚರಣೆಯ ಪ್ರಯುಕ್ತ ಎಲ್ಲಾ ಶಿಕ್ಷಕರು ಗಿಡವನ್ನು ನೆಡುವುದರ ಮೂಲಕ ಪರಿಸರ ದಿನಾಚರಣೆಯನ್ನು ಆಚರಿಸಲಾಯಿತು.ಪರಿಸರ ದಿನಾಚರಣೆ ಅಂಗವಾಗಿ ಮಕ್ಕಳಿಗೆ ಪ್ರಬಂಧ ಸ್ಪರ್ಧೆ ಮತ್ತು ಚಿತ್ರಕಲಾ ಸ್ಪರ್ಧೆ ನಡೆಸಲಾಯಿತು.

# ವಿ.ಎಂ.ಸಿ.ಯಲ್ಲಿ ವಿಶ್ವ ಪರಿಸರ ದಿನಾಚರಣೆ



ದಿನಾಂಕ 05.06.2026ರಂದು ಶ್ರೀ ವೀರಭದ್ರಪ್ಪ ಎಂ ಚಿಗಟೇರಿ ನರ್ಸರಿ ಹಾಗೂ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕರಿಂದ ಹಾಗೂ ವಿದ್ಯಾರ್ಥಿಗಳಿಂದ ಗಿಡ ನೆಡುವ ಮೂಲಕ ಪರಿಸರ ದಿನಾಚರಣೆಯನ್ನು ಆಚರಿಸಲಾಯಿತು ಹಾಗೂ ಹಿರಿಯ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗೆ ಪರಿಸರದ ಬಗ್ಗೆ ಚಿತ್ರಕಲೆಯನ್ನು ಮಾಡಿಸಲಾಯಿತು . ಎಲ್ಲಾ ವಿದ್ಯಾರ್ಥಿಗಳು ಚಿತ್ರ ಬಿಡಿಸುವ ಮೂಲಕ ಪರಿಸರ ದಿನಾಚರಣೆಯನ್ನು ಆಚರಿಸಿದರು ಹಾಗೂ ವಿದ್ಯಾರ್ಥಿಗಳಿಂದ ಪರಿಸರ ದಿನಾಚರಣೆಯ ಬಗ್ಗೆ ಪ್ರಬಂಧವನ್ನು ಬರೆಸಲಾಯಿತು ಪರಿಸರ ದಿನಾಚರಣೆ ಯಲ್ಲಿ ಯಶಸ್ವಿಯಾಗಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ತುಂಬು ಹೃದಯದ ಧನ್ಯವಾದಗಳು.

# World Environment Day and Forest Ecosystem

World Environment Day is celebrated every year on June 5th.



Photosynthesis is the process by which green plants prepare their own food using sunlight, water, and carbon dioxide. For better photosynthesis, plants need sufficient sunlight. Some seeds require light for germination, while others need darkness.

Roots grow downward into the soil to anchor the plant and absorb water and minerals. Shoots grow upward towards the sunlight to carry out photosynthesis.

New plants can be obtained from seeds or from the main plant body through vegetative propagation. In vegetative propagation, each detached part can grow into a new plant. Plants produced through vegetative propagation take less time to grow and bear flowers and fruits earlier than plants grown from seeds.
The environment was peaceful, and a cool breeze was blowing. This made the children feel fresh and happy. The trees were covered with different types of creepers and climbers. Sunlight filtered through the leaves of the trees, making it quite dark inside the forest. Some trees had crown-shaped tops. A few children were busy watching beautiful butterflies fluttering among the flowers of shrubs and herbs.
A forest ecosystem consists of plants, animals, soil, and decomposers. Plants are producers that make food through photosynthesis. Animals depend on plants either directly or indirectly for food. Decomposers such as fungi and bacteria break down dead plants and animals, returning nutrients to the soil. Thus, plants, animals, soil, and decomposers are interdependent and help maintain the balance of the forest ecosystem.

Written By
Ku. Zoya Khanum & Ku. Noorain D T
7th Std E. M SVMCHPS

## ಮೇ 7 – ಬುದ್ಧ ಜಯಂತಿ ಅಥವಾ ಬುದ್ಧ ಪೂರ್ಣಿಮಾ



ವೈಶಾಖ ಮಾಸದ ಹುಣ್ಣಿಮೆಯಂದು ಗೌತಮ ಬುದ್ಧ ಕಪಿಲವಸ್ತು ದೇಶದ ಬಳಿಯ ಲುಂಬಿನಿಯಲ್ಲಿ ಜನಿಸಿದನು. ಬುದ್ಧನನ್ನು & ಏಷ್ಯಾದ ಜ್ಯೋತಿ ಅಥವಾ ಏಷ್ಯಾದ ಬೆಳಕು ಎಂದು ಕರೆಯುತ್ತಾರೆ. ತನ್ನ ಜೀವನದ ಕಷ್ಟಗಳು, ರೋಗ, ಮುಪ್ಪು ಮತ್ತು ಮರಣವನ್ನು ಕಂಡು ವಿಚಲಿತನಾದ ಸಿದ್ಧಾರ್ಥನು ಸತ್ಯದ ಹುಡುಕಾಟಕ್ಕಾಗಿ ತನ್ನ ರಾಜ್ಯ, ಪತ್ನಿ ಮತ್ತು ಮಗುವನ್ನು ತ್ಯಜಿಸಿ ಸನ್ಯಾಸಿಯಾದನು. ಬುದ್ಧ ಪೂರ್ಣಿಮೆಯು ಕೇವಲ ಒಂದು ಆಚರಣೆಯಲ್ಲ, ಬದಲಿಗೆ ಅದು ಜ್ಞಾನ ಮತ್ತು ಅಹಿಂಸೆಯ ಸಂಕೇತವಾಗಿದೆ. ಬುದ್ಧನು ಆಸೆಯೇ ದುಃಖಕ್ಕೆ ಮೂಲ ಎಂಬ ಮಹಾನ್ ಸತ್ಯವನ್ನು ಜಗತ್ತಿಗೆ ಸಾರಿದನು.

# ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ



ವಿಶ್ವ ಪರಿಸರ ದಿನವನ್ನು ಪ್ರತಿವರ್ಷ ಜೂನ್ ೫ ರಂದು ವಿಶ್ವದಾದ್ಯಂತ ಸುಮಾರು ೧೪೩ ದೇಶಗಳು ಆಚರಿಸುತ್ತವೆ. ಪರಿಸರದ ಕಾಳಜಿ ಜೊತೆಗೆ ಜನರಿಗೆ ಪರಿಸರದ ಮಹತ್ವ ಸಾರುವ ಹಾಗೂ ಜನರಲ್ಲಿ ಜಾಗೃತಿಗೊಳಿಸುವ ಉದ್ದೇಶದಿಂದ ಇದನ್ನು ವಿಶ್ವ ಸಂಸ್ಥೆಯು ಸ್ಥಾಪಿಸಿತು. ೧೯೭೪ ರಿಂದ ಪ್ರತಿ ವರ್ಷ ವಿಶ್ವ ಪರಿಸರ ದಿನವನ್ನು ನಿರ್ದಿಷ್ಟ ಥೀಮ್‌ನೊಂದಿಗೆ ಆಚರಿಸುತ್ತಾ ಬಂದಿದೆ. ವಿಶ್ವ ಪರಿಸರ ದಿನಾಚರಣೆಯ ಜಾಗೃತಿಕ ಆಚರಣೆಯನ್ನು ನಿಯಂತ್ರಿಸುವ ಮುಖ್ಯ ಸಂಸ್ಥೆ ವಿಶ್ವಸಂಸ್ಥೆ. ಈ ವಿಶ್ವ ಪರಿಸರ ದಿನವನ್ನು ಏಕೆ ಆಚರಿಸಲಾಗುತ್ತದೆ?

ಪರಿಸರವು ಪ್ರತಿಯೊಂದು ಜೀವರಾಶಿಗೆ ಅತ್ಯಂತ ಅಮೂಲ್ಯ ಕೊಡುಗೆಯಾಗಿದೆ ಪರಿಸರದಲ್ಲಿನ ಗಾಳಿ, ನೀರು, ಮಣ್ಣು ಮರಗಳು, ಕಾಡುಗಳು, ಸಾಗರಗಳು ಇತ್ಯಾದಿಗಳು ಎಂದೆಂದಿಗೂ ಉಳಿಯುವುದು ಬಹಳ ಮುಖ್ಯ ನಾವು ಅವಲಂಬಿತವಾಗಿರುವ ಈ ಪರಿಸರ ಯುಗ ಯುಗಳವರೆಗೂ ಹೀಗೆಯೂ ಉಳಿಯಬೇಕಿದೆ. ಬೇಸರವೆಂದರೆ ನಾವು ಮಾಡುತ್ತಿರುವ ಅರಣ್ಯನಾಸ ಗಣಿಗಾರಿಕೆ ಕೈಗಾರಕೀಕರಣ ಸೇರಿದಂತೆ ಹಲವಾರು ಮಾನವ ಚಟುವಟಿಕೆಗಳಿಂದ ಪರಿಸರವು ಇದು ಹಾನಿಗೊಳಗಾಗುತ್ತದೆ.

ಪರಿಸರದೊಂದಿಗೆ ಮಾನವನ ಹಸ್ತಕ್ಷೇಪದಿಂದಾಗಿ ಈ ಹಾನಿಯನ್ನು ಕಡಿಮೆ ಮಾಡುವುದು ಮತ್ತು ಪರಿಸರ ಸಂರಕ್ಷಣೆಯ ಬಗ್ಗೆ ಜಾಗೃತಿ ಮೂಡಿಸಲು ವಿಶ್ವಸಂಸ್ಥೆಯು ವಿಶ್ವ ಪರಿಸರ ದಿನವನ್ನು ಆಚರಿಸುತ್ತವೆ. ಯೋಚನೆದೊಂದಿಗೆ ಭಾಗವಹಿಸುತ್ತಾ ಬಂದಿತು.

ವಿಶ್ವ ಪರಿಸರ ದಿನಾಚರಣೆಯಲ್ಲಿ ನೀವು ಭಾಗವಹಿಸಲು ಹಲವಾರು ಮಾರ್ಗಗಳಿವೆ ಸಾಮಾಜಿಕ ಮಾಧ್ಯಮದಲ್ಲಿ ಸಕ್ರಿಯರಾಗಿ ನಿಮ್ಮ ಅಭಿಪ್ರಾಯವನ್ನು ನೀಡಿ ಮತ್ತು ಇತರರಿಗೆ ಸ್ಫೂರ್ತಿ ನೀಡಿ ಮತ್ತು ಇನ್ನೂ ಮುಂತಾದ ನೈಸರ್ಗಿಕ ಸಂಪನ್ಮೂಲಗಳ ಅತ್ಯುತ್ತಮ ಬಳಕೆಯ ಬಗ್ಗೆ ನೀವೇ ಬದ್ಧರಾಗಿರಿ ಕಡಿಮೆ ವಿದ್ಯುತ್ ಬಳಸಿ ಮತ್ತು ಪಳೆಯುಳಿಕೆ ಇಂಧನ.

ಪೆಟ್ರೋಲಿಯಂ ಇತ್ಯಾದಿಗಳನ್ನು ಸುಡುವುದನ್ನು ತಪ್ಪಿಸಿ ನಿಮ್ಮ ಸುತ್ತಮುತ್ತ ಅಥವಾ ನೆರೆಹೊರೆಯಲ್ಲಿ ಹೊಸ ಮರವನ್ನು ಮಾನವನ ಚಟುವಟಿಕೆಗಳಿಂದ ಪರಿಸರಕ್ಕೆ ಹಾನಿಯಾಗದಂತೆ ಮಾಡಲು ವಿಶ್ವ ಪರಿಸರ ದಿನವನ್ನು ಜಗತ್ತಿನ ಎಲ್ಲ ದೇಶಗಳು ಆಚರಿಸಬೇಕು.

**ಖುಷಿ ಪಿ. ಏಳನೇ ತರಗತಿ ಜಿ.ವಿ.ಸಿ.ಹೆಚ್.ಪಿ.ಎಸ್. (ಕ.ಮಾ.)**

# ಮೇ 7 ರವೀಂದ್ರನಾಥ ಟ್ಯಾಗೋರ್ ಜಯಂತಿ.



ರವೀಂದ್ರನಾಥರವರು ಮೇ 7, 1861 ರಂದು ಕೊಲ್ಕತ್ತಾದಲ್ಲಿ ಜನಿಸಿದರು. ಪಶ್ಚಿಮ ಬಂಗಾಳದಲ್ಲಿ ಇದನ್ನು ಬೋಯಿಶಾಖ್ ತಿಂಗಳ 25 ನೇ ದಿನದಂದು ಆಚರಿಸಲಾಗುತ್ತದೆ. ಇವರು ಭಾರತದ ಶ್ರೇಷ್ಠ ಕವಿಗಳು. ಕಾದಂಬರಿಕಾರರು, ಲೇಖಕರು, ಬಂಗಾಳಿ ಕವಿಗಳು, ಮಾನವತಾವಾದಿಗಳು, ತತ್ವಜ್ಞಾನಿಗಳು ಮುಂತಾದವರಲ್ಲಿ ಒಬ್ಬರಾಗಿದ್ದರು. 1913 ರಲ್ಲಿ ಇವರಿಗೆ ಸಾಹಿತ್ಯದಲ್ಲಿ ನೋಬೆಲ್ ಪ್ರಶಸ್ತಿ ನೀಡಿ ಗೌರವಿಸಲಾಯಿತು.

# ಮೇ – 8 ವಿಶ್ವ ರೆಡ್ ಕ್ರಾಸ್ ದಿನ

ವಿಶ್ವ ರೆಡ್ ಕ್ರಾಸ್ ದಿನವನ್ನು ಮೇ 8 ರಂದು ಆಚರಿಸಲಾಗುತ್ತದೆ. ಈ ಸಂಸ್ಥೆಯನ್ನು 1863 ರಲ್ಲಿ ಹೆನ್ರಿ ಡುನಾಂಟ್ ರವರು ಸ್ಥಾಪಿಸಿದರು. ಈ ಸಂಸ್ಥೆಯು ಕಷ್ಟದಲ್ಲಿರುವ ಜನರಿಗೆ ಸಹಾಯ ಮಾಡುತ್ತದೆ. ಈ ಸಂಸ್ಥೆಯು ಬಡವರಿಗೆ ಆಹಾರ ಮತ್ತು ಔಷಧಗಳನ್ನು ನೀಡುತ್ತದೆ. ಇದು ಜನರಲ್ಲಿ ಪ್ರೀತಿ ಮತ್ತು ದಯೆಯನ್ನು ಬೆಳೆಸುತ್ತದೆ. ಈ ಸಂಸ್ಥೆಯು ಜನರ ಜೀವ ಮತ್ತು ಆರೋಗ್ಯವನ್ನು ಕಾಪಾಡುತ್ತದೆ. ನಾವೆಲ್ಲರೂ ಇತರರಿಗೆ ಸಹಾಯ ಮಾಡುವುದನ್ನು ಇದು ತಿಳಿಸುತ್ತದೆ.




## ವಿಶ್ವ ತಾಯಂದಿರ ದಿನ:




ಪ್ರತಿವರ್ಷ ಮೇ ತಿಂಗಳ 2ನೇ ಭಾನುವಾರ ತಾಯಂದಿರ ದಿನವನ್ನು ಆಚರಿಸುತ್ತೇವೆ. ತಾಯಿಯ ಪ್ರೀತಿ ಮತ್ತು ತ್ಯಾಗವನ್ನು ಗೌರವಿಸುವ ದಿನವಾಗಿದೆ. ನಮ್ಮ ಬೆಳವಣಿಗೆ ಶಿಕ್ಷಣ ಮತ್ತು ಭವಿಷ್ಯಕ್ಕಾಗಿ ತಾಯಿ ಹಗಲು–ರಾತ್ರಿ ಶ್ರಮಿಸುತ್ತಾಳೆ. ತಾಯಿಯೇ ನಮ್ಮ ಜೀವನದ ಮೊದಲ ಗುರುವಾಗಿದ್ದಾಳೆ. ಈ ದಿನ ತಾಯಂದಿರಿಗೆ ಉಡುಗೊರೆಗಳನ್ನು ಕೊಟ್ಟು ಅವರನ್ನು ಸಂತೋಷಪಡಿಸುತ್ತೇವೆ. ತಾಯಿಗೆ ಸಹಾಯ ಮಾಡುವುದು ನಮ್ಮ ಕರ್ತವ್ಯವಾಗಿದೆ. ತಾಯಿಯ ಪಾತ್ರ ನಮ್ಮ ಜೀವನದಲ್ಲಿ ಅತ್ಯಂತ ಅಮೂಲ್ಯ ಮತ್ತು ಶಕ್ತಿಶಾಲಿಯಾಗಿದೆ.

## ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ:




ದಿನಾಂಕ:2–6–2026 ರಂದು ಕರ್ನಾಟಕ ರಾಜ್ಯಮಾಲಿನ್ಯ ನಿಯಂತ್ರಣ ಮಂಡಳಿ ವತಿಯಿಂದ ವಿಶ್ವ ಪರಿಸರ ದಿನಾಚರಣೆ 2026 ರ ಅಂಗವಾಗಿ ಆಯೋಜಿಸಿದ್ದ ರಸಪ್ರಶ್ನೆ, ಪ್ರಬಂಧ ಸ್ಪರ್ಧೆ, ಚಿತ್ರಕಲಾ ಸ್ಪರ್ಧೆಯಲ್ಲಿ ನಮ್ಮ ಶಾಲೆಯ 10ನೇ ತರಗತಿ ಮತ್ತು 9ನೇ ತರಗತಿಯ ವಿದ್ಯಾರ್ಥಿಗಳು ಪ್ರಬಂಧ ಸ್ಪರ್ಧೆ ಮತ್ತು ಚಿತ್ರಕಲಾ ಸ್ಪರ್ಧೆಗೆ ಭಾಗವಹಿಸಿದ್ದಕ್ಕಾಗಿ ಮಕ್ಕಳಿಗೆ ಅಭಿನಂದನಾ ಪತ್ರವನ್ನು ನೀಡಿ ಗೌರವಿಸಿರುತ್ತಾರೆ.ಈ ಮಕ್ಕಳಿಗೆ ಶಾಲೆಯ ಪರವಾಗಿ ಮತ್ತು ಸಂಸ್ಥೆಯ ಪರವಾಗಿ ತುಂಬು ಹೃದಯದ ಅಭಿನಂದನೆಗಳು.

# ವೀರ ಗುರುವಿನ ಬೆಳಕು

ಬೆಳಗುತಿದೆ ಬೆಳಗುತಿದೆ ನೋಡಿಲ್ಲಿ ವಿದ್ಯಾಸಂಸ್ಥೆಯು ನಮ್ಮದೇವನಗರಿಯ ಉಜ್ವಲ ಜಯವಿಭವ ವಿದ್ಯಾಸಂಸ್ಥೆಯು
ಚೆಗಟೇರಿ ಮನೆತನದ ನಮ್ಮ ಹೆಮ್ಮೆಯ ಶ್ರೀ ವೀರಭದ್ರಪ್ಪನವರು ಜ್ಯೋತಿಯನ್ನು ಬೆಳಗಿಸಿದ ಜ್ಞಾನ ದೇಗುಲ
ಶಿಸ್ತು ಶಾಂತಿ ಸಂಸ್ಕಾರದ ಭವ್ಯ ದೇಗುಲ  ನ್ಯಾಯ ನೀತಿ ಸತ್ಯ ಧರ್ಮಗಳ ಬೆಳಗುವ ದೇಗುಲ
ಅಕ್ಕಮಹಾದೇವಿಯ ಕೀರ್ತಿಯನ್ನು ಬೆಳಗಿಸಿದ ಶಾಲೆಯು
ಮುರುಘರಾಜೇಂದ್ರರ ಆದರ್ಶವನ್ನು ಪಾಲಿಸುವ ಶಾಲೆಯು
ಗುರುಬಸಮ್ಮನವರ ಹೆಸರನು
ನಾಡಿನೆಲ್ಲಡೆ ಬೆಳಗಿಸಿದ ಶಾಲೆಯು
ಶಿವಣ್ಣ ಶಿಶು ವಿಹಾರದ ಮುದ್ದು ಮಕ್ಕಳೇ ನಾಡಿನ ನಾಳೆಯ ಪ್ರಜೆಗಳು
ವಿದ್ಯಾ ಸಂಸ್ಥೆಗೆ ಗೌರವ ತರುವ ಮುದ್ದು ಮಕ್ಕಳು ಜಯಕಿರಣ ಹೊಂಗಿರಣದಂತೆ ಬೆಳಗುತಿರುವ ಮಕ್ಕಳು ನಮ್ಮ ಮುದ್ದು ಮಕ್ಕಳು
ಹಿರಿಯರನ್ನು ಗೌರವಿಸುವ ಸಂಸ್ಕಾರ ಪಡೆದ ನಮ್ಮ ಮುದ್ದು ಮಕ್ಕಳು
ಉಜ್ವಲ ಭವಿಷ್ಯದ ಕನಸನು ಕಾಣುವ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವ ನಮ್ಮ ಗುರುಗಳು ಕಾಯಕವೇ ಕೈಲಾಸ ಎಂದು ಬೋಧಿಸುವ ನಮ್ಮ ಗುರುಗಳು
ಹಿರಿಯ ಚೇತನಗಳು ಕಟ್ಟಿ ಬೆಳೆಸಿದಂತ ಜ್ಞಾನ ದೇಗುಲ ಬೆಳಗುತಿದೆ ಬೆಳಗುತಿದೆ ನೋಡಿಲ್ಲಿ ನಮ್ಮ ವಿದ್ಯಾ ಸಂಸ್ಥೆಯು ದೇವನಗರಿಯ ಉಜ್ವಲ ಜಯ ವಿಭವ ವಿದ್ಯಾ ಸಂಸ್ಥೆಯು

ನಮ್ಮ ಸಂಸ್ಥೆ ನಮ್ಮ ಹೆಮ್ಮೆ
ನಮ್ಮ ವಿದ್ಯಾರ್ಥಿಗಳು ನಮಗೆ ಹೆಮ್ಮೆ

ರಚನೆ

ಶೈಲಜಾ ಎಸ್ ಎಂ ಮುಖ್ಯೋಪಾಧ್ಯಾಯನಿ ಎಸ್ ವಿ ಎಂ ಸಿ ಎಚ್ ಪಿ ಎಸ್

## 2026-27ನೇ ಸಾಲಿನ ಪಠ್ಯ ಪುಸ್ತಕ ವಿತರಣೆ.



ದಿನಾಂಕ 30-05-2026ರಂದು ಅಕ್ಕಮಹಾದೇವಿ ಬಾಲಿಕಾ ಪ್ರೌಢಶಾಲೆಯಲ್ಲಿ ಮುಖ್ಯೋಪಾಧ್ಯಾಯರ ನೇತೃತ್ವದಲ್ಲಿ ವಿದ್ಯಾರ್ಥಿಗಳಿಗೆ ಉಚಿತ ಪಠ್ಯಪುಸ್ತಕ ವಿತರಿಸಲಾಯಿತು.

# ನಿವೃತ್ತರಿಗೆ ಆತ್ಮೀಯ ಬೀಳ್ಕೊಡುಗೆ



ದಿನಾಂಕ 1.6.2026ರಂದು ಅಕ್ಕಮಹಾದೇವಿ ಬಾಲಿಕಾ ಪ್ರೌಢಶಾಲೆಯಲ್ಲಿ ಸಹ ಶಿಕ್ಷಕರಾಗಿ ಸುಧೀರ್ಘ ಸೇವೆಯನ್ನು ಸಲ್ಲಿಸಿದಂತಹ ಶ್ರೀಮತಿ ಡಿ ಆರ್ ಶಿವಲೀಲಾ ಶ್ರೀಯುತ ಕೆ ಆರ್ ರುದ್ರಪ್ಪ ಮತ್ತು ಪ್ರಾಥಮಿಕ ವಿಭಾಗದಲ್ಲಿ ಸೇವೆ ಸಲ್ಲಿಸಿದಂತಹ ಶ್ರೀಮತಿ ಸುನಂದ ಇವರುಗಳಿಗೆ ಆಡಳಿತ ಮಂಡಳಿ ಹಾಗೂ ನಮ್ಮ ವಿದ್ಯಾ ಸಂಸ್ಥೆಯ ಅಡಿಯಲ್ಲಿ ನಡೆಯುತ್ತಿರುವ ಎಲ್ಲಾ ಶಾಲೆಗಳ ಮುಖ್ಯೋಪಾಧ್ಯಾಯರು ಮತ್ತು ಶಿಕ್ಷಕರು ಹಾಗೂ ಸಿಬ್ಬಂದಿ ವರ್ಗದವರಿಂದ ನಿವೃತ್ತಿ ಜೀವನಕ್ಕೆ ಶುಭ ಹಾರೈಸಿ ಆತ್ಮೀಯವಾಗಿ ಬೀಳ್ಕೊಡಲಾಯಿತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಸ್ಥೆಯ ಕಾರ್ಯದರ್ಶಿಯವರಾದ ಮನೋಹರ ಎಸ್  ಚೆಗಟೇರಿಯವರು ವಹಿಸಿದ್ದರು ಮತ್ತು ಎಲ್ಲಾ ಶಾಲೆಗಳ ಮುಖ್ಯೋಪಾಧ್ಯಾಯರು ,ಶಿಕ್ಷಕರು ಮತ್ತು ಸಿಬ್ಬಂದಿ ವರ್ಗದವರು ಹಾಗೂ ಶೈಕ್ಷಣಿಕ ಸಲಹೆಗಾರರು ಉಪಸ್ಥಿತರಿದ್ದರು.

# ವಿಶ್ವ ಸೈಕಲ್ ದಿನ – 2026




ಮೇರಾ ಯುವ ಭಾರತ್ ಮಿಷನ್ ವತಿಯಿಂದ ರಾಷ್ಟ್ರೀಯ ಸೇವಾ ಯೋಜನೆ  ಹಾಗೂ ಅಕ್ಕಮಹಾದೇವಿ ಬಾಲಿಕಾ ಪ್ರೌಢಶಾಲೆ ಇವರ ಸಂಯುಕ್ತಾಶ್ರಯದಲ್ಲಿ ದಿನಾಂಕ 5-6-2026ರ  ಗುರುವಾರದಂದು ಅಕ್ಕಮಹಾದೇವಿ ಬಾಲಿಕಾ ಪ್ರೌಢಶಾಲೆಯ ನರಸರಾಜ್ ಕ್ಯಾಂಪಸ್ ನಲ್ಲಿ ವಿಶ್ವ ಸೈಕಲ್ ದಿನಾಚರಣೆ ಅಂಗವಾಗಿ ಮಕ್ಕಳಿಗೆ ಸೈಕಲ್ ನ ಮಹತ್ವ ಆರೋಗ್ಯ ಹಾಗೂ ಪರಿಸರ ಮಾಲಿನ್ಯದ ಕುರಿತು ಜಾಗೃತಿ ಮೂಡಿಸಲಾಯಿತು ಕಾರ್ಯಕ್ರಮದಲ್ಲಿ ಸಂಸ್ಥೆಯ ಕಾರ್ಯದರ್ಶಿಯರಾದ ಶ್ರೀ ಮನೋಹರ ಎಸ್ ಚೆಗಟೇರಿಯವರು, ಮುಖ್ಯೋಪಾಧ್ಯಾರಾದ  ಶ್ರೀ ಸುರೇಶ್ ನಾಯ್ಕ ಜಿ  ರವರು ,ಜಿಲ್ಲಾ ಪಂಚಾಯಿತಿ ಸಂಚಾಲಕಿ ಕುಮಾರಿ ಶರಣ್ಯ ಹಾಗೂ ಎನ್ಎಸ್ಎಸ್ ನೋಡಲ್ ಅಧಿಕಾರಿಗಳಾದ ಶ್ರೀ ಲೋಕೇಶ್ ರವರು ಉಪಸ್ಥಿತರಿದ್ದು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ಎಲ್ಲಾ ವಿದ್ಯಾರ್ಥಿನಿಯರಿಗೆ ಉಚಿತವಾಗಿ ಟಿ-ಶರ್ಟ್ ವಿತರಿಸಲಾಯಿತು

# ಶಿವಣ್ಣ ಚಿಗಟೇರಿ ನರ್ಸರಿ ಮಕ್ಕಳ ಚಟುವಟಿಕೆಗಳ ಚಿತ್ರಪಟಗಳು














